**ಅ.ದಾವಾ ನಂ. 213/17** **ಪಿ.ಡಬ್ಲ್ಯೂ-1**

**ದಿನಾಂಕ 04/01/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್ ಆರ್.ಜಿ. ವಕೀಲರಿಂದ**

ನನ್ನ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ಅಂಶಗಳು ನನಗ ಗೊತ್ತಿರುತ್ತದೆ. ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ವಾದಪತ್ರದಲ್ಲಿ ನಾನು ನನ್ನ ವಿಳಾಸ ಹಿರೇಬೆಳಗುಳಿ ಗ್ರಾಮ ಎಂದು ನೀಡಿರುತ್ತೇನೆ. ಪ್ರತಿವಾದಿಯ ವಿಳಾಸ ವಾದಪತ್ರದಲ್ಲಿ ಬಿಲ್ಲೇನಹಳ್ಳಿ ಎಂದು ನೀಡಿರುತ್ತೇನೆ. ನನ್ನ ವಿಳಾಸಕ್ಕೂ ಪ್ರತಿವಾದಿಯ ವಿಳಾಸಕ್ಕೂ 14 ಕಿ.ಮೀ. ಅಂತರ ಇರುತ್ತದೆ ಎಂದರೆ ಸರಿ.

2. ಪ್ರತಿವಾದಿಯ ಅಣ್ಣತಮ್ಮಂದಿರು ಎಷ್ಟು ಮಂದಿ ಎಂದು ನನಗೆ ಗೊತ್ತಿಲ್ಲ. ನನ್ನ ಊರು ಹಿರೇಬೆಳಗುಳಿಯಾಗಿದ್ದು, ಪ್ರತಿವಾದಿಯ ಊರು ಬಿಲ್ಲೇನಹಳ್ಳಿಯಾಗಿದ್ದು ನನಗೂ ಆತನಿಗೂ ಪರಿಚಯವೇ ಇಲ್ಲ ಎಂದರೆ ಸರಿಯಲ್ಲ.

3. ನಾನು ಲಾರಿ ಚಾಲಕನಾಗಿರುತ್ತೇನೆ. ಲಾರಿ ಚಾಲನೇ ಬಿಟ್ಟು ಬೇರೆ ಯಾವುದೇ ಕೆಲಸವನ್ನು ನಾನು ಮಾಡುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಾನು ಏನು ವೃತ್ತಿ ಮಾಡುತ್ತಿದ್ದೇನೆಂದು ನಮೂದಾಗಿದೆ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ ಎಂದರೆ ಸರಿ . 2016 ನೇ ಇಸವಿಗೆ ನಾನು ಬೇರೆಯವರ ಲಾರಿಯಲ್ಲಿ ಚಾಲಕನಾಗಿದ್ದೆ. 2016 ನೇ ಸಾಲಿಗೆ ನನಗೆ ಲಾರಿ ಚಾಲನೆ ಮಾಡಿದರೆ ತಿಂಗಳಿಗೆ 15 ಸಾವಿರ ಸಂಬಳ ನೀಡುತ್ತಿದ್ದರು. 2016 ನೇ ಇಸವಿಗೆ ನನಗೆ ಇನ್ನೂ ಮದುವೆ ಆಗಿರಲಿಲ್ಲ. ನನ್ನ ತಂದೆ 2016 ನೇ ಸಾಲಿಗೆ ಶಿಕ್ಷಕರಾಗಿದ್ದರು. ನನ್ನ ದುಡಿಮೆಯಲ್ಲಿ ಯಾವ ಭಾಗವನ್ನು ನಾನು ಮನೆಗೆ ನೀಡುವ ಅವಶ್ಯಕತೆ ಇರಲಿಲ್ಲ. ನನಗೆ ತಿಂಗಳಿಗೆ 15 ಸಾವಿರ ಆದಾಯವಿತ್ತು 2016 ನೆ ಸಾಲಿಗೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

4. ನಾನು ಮತ್ತು ಪ್ರತಿವಾದಿ 2016 ರ 3 ವರ್ಷಗಳ ಹಿಂದಿನಿಂದಲೂ ಸ್ನೇಹಿತರಾಗಿದ್ದೆವು. ಈಗ್ಗೆ 7 ತಿಂಗಳ ಹಿಂದೆ ನಾನು ಲಾರಿಯನ್ನು ಖರೀದಿ ಮಾಡಿರುತ್ತೇನೆ. ಸದರಿ ಲಾರಿ ದೊಡ್ಡ ಲಾರಿಯಾಗಿರುತ್ತದೆ. ಪ್ರತಿವಾದಿಗೆ ಎಷ್ಟು ಜಮೀನಿರುತ್ತದೆ ಎಂದು ನನಗೆ ಗೊತ್ತಿಲ್ಲ.

5. ಜೂನ್ 11, 2016 ರಂದು ಪ್ರತಿವಾದಿ ನನ್ನ ಬಳಿ ಬಂದು ಹಣ ಕೇಳಿರುತ್ತಾರೆ. ಹಣವನ್ನು ನಮ್ಮ ಊರಿಗೇ ಬಂದು ಪ್ರತಿವಾದಿ ಕೇಳಿರುತ್ತಾರೆ. ಹಣ ಕೇಳುವ ಕಾಲಕ್ಕೆ ನಾನು ಮತ್ತು ಪ್ರತಿವಾದಿ ಇಬ್ಬರೇ ಇದ್ದೆವು. ನಾನು ಯಾವುದೇ ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ಪ್ರತಿವಾದಿಗೆ ನಾನು 1 ವರೆ ಬಡ್ಡಿ ಪರ್ಸೆಂಟ್

ದರದಂತೆ ಸಾಲ ನೀಡಿರುತ್ತೇನೆ. ಹಣ ಪಡೆದು ಪ್ರತಿವಾದಿ ನನಗೆ ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟನ್ನು ಕೊಟ್ಟಿರುತ್ತಾರೆ. ಪ್ರತಿವಾದಿ ನನ್ನ ಬಳಿ ಹಣವೇ ಕೇಳಿಲ್ಲ ಮತ್ತು ಯಾವುದೇ ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಲಾರಿ ಖರೀದಿ ಮಾಡಲು ಪ್ರತಿವಾದಿ ಮತ್ತು ನಾನು ಅವರ ತಂದೆಯ ಜಮೀನಿನ ಕಾಗದಗಳನ್ನು ಪಡೆದುಕೊಂಡು ಅವುಗಳಲ್ಲಿ ಪ್ರತಿವಾದಿಯ ಸಹಿಯನ್ನು ನಾನು ಪಡೆದು ದುರುಪಯೋಗಪಡಿಸಿಕೊಂಡು ಅಕ್ರಮ ಲಾಭ ಹೊಂದಲು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

6. ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟನ್ನು ಬುಕ್ ಸ್ಟೋರ್ ನಲ್ಲಿ ಪ್ರತಿವಾದಿಯೇ ಖರೀದಿ ಮಾಡಿ ತಂದಿರುತ್ತಾರೆ. ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟನ್ನು ಪೂರ ಪ್ರತಿವಾದಿಯೇ ಬರೆದು ನನಗೆ ನೀಡಿರುತ್ತಾರೆ. ಪ್ರತಿವಾದಿಯಾ ತನ್ನ ಸ್ವಂತ ಹಸ್ತಾಕ್ಷರದಲ್ಲಿ ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟನ್ನು ಬರೆದಿರುತ್ತಾರೆ. ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟಿನಲ್ಲಿ ಬರೆದಂತಹ ಅಂಶಗಳನ್ನು ಓದಿ ತಿಳಿದುಕೊಂಡು ಪ್ರತಿವಾದಿಗೆ ಸಾಲ ನೀಡಿರುತ್ತೇನೆ. ಪ್ರತಿವಾದಿ ಹಣವನ್ನು ಒಂದು ವರ್ಷದ ಒಳಗೆ ಹಿಂತಿಗಿರುಸುವುದಾಗಿ ಹೇಳಿ ಪಡೆದಿರುತ್ತಾರೆ. ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟಿನ ಮೇಲೆ ಪ್ರತಿವಾದಿ ಎಷ್ಟು ಕಡೆ ಸಹಿ ಹಾಕಿದ್ದಾರೆ ಎಂದು ನನಗೆ ನೆನಪಿಲ್ಲ. ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟನ್ನು ಹೊರತುಪಡಿಸಿ ಪ್ರತಿವಾದಿ ಬೇರೆಲ್ಲೂ ಸಹಿ ಮಾಡಲಿಲ್ಲ. ಎಲ್ಲಾ ದಾಖಲೆಗಳು ತಯಾರಾಗಿ ನಾನು ನೋಡಿಕೊಂಡ ಮೇಲೆ ಪ್ರತಿವಾದಿಗೆ ಹಣ ನೀಡಿರುತ್ತೇನೆ. ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟಿನ ಮೇಲೆ ಪ್ರತಿವಾದಿ ಒಬ್ಬರನ್ನು ಹೊರತುಪಡಿಸಿ ಯಾವುದೇ ಡಿಕ್ಲೇಮ್ ದಾರರ ಅಥವಾ ಸಾಕ್ಷಿದಾರರ ಸಹಿಗಳು ಇಲ್ಲ ಎಂದರೆ ಸರಿ.

7. ಪ್ರತಿವಾದಿ ನನಗೆ ಸಾಲ ಹಿಂತಿರುಗಿಸಿಲ್ಲವೆಂದು ನನ್ನ ವಕೀಲರ ಮೂಲಕ 22 ಮಾರ್ಚ್ 2017 ರಂದು ತಿಳುವಳಿಕೆ ಪತ್ರ ನೀಡಿರುತ್ತೇನೆ. ನನ್ನ ತಿಳುವಳಿಕೆ ಪತ್ರಕ್ಕೆ ಪ್ರತಿವಾಯಿಂದ ಯಾವುದೇ ಮರುತ್ತರ ತಿಳುವಳಿಕೆ ಪತ್ರ ಬಂದಿರುವುದಿಲ್ಲ. ನಾನು ಕಳುಹಿಸಿದಂತಹ ತಿಳುವಳಿಕೆ ಪತ್ರ ಪ್ರತಿವಾದಿಗೆ ತಲುಪಿತೇ ಇಲ್ಲವೇ ಎಂದು ನಾನು ತಿಳಿದುಕೊಂಡಿಲ್ಲ. ನನಗೂ ಪ್ರತಿವಾದಿಗೂ ಯಾವುದೇ ಹಣಕಾಸಿನ ವ್ಯವಹಾರವೇ ಆಗಿಲ್ಲ ಎಂದರೆ ಸರಿಯಲ್ಲ. ಹಣಕಾಸಿನ ವ್ಯವಹಾರ ನಡೆಯದೇ ನಾನು ನನ್ನ ವಕೀಲರ ಮೂಲಕ ಯಾವುದೇ ತಿಳುವಳಿಕೆ ಪತ್ರವನ್ನು ಪ್ರತಿವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ ನನ್ನ ಸ್ನೇಹಿತನಾದ ಕಾರಣ ಆತನ ಸಹಿಯನ್ನೂ ನಾನೇ ಫೋರ್ಜರಿ ಮಾಡಿ ಪ್ರೋನೋಟ್ ಒಂದನ್ನು

ತಯಾರಿಸಿಕೊಂಡು ಸುಳ್ಳು ದಾವೆಯೊಂದನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**